ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	:	**362**
ಸದಸ್ಯರ ಹೆಸರು	:	**ಶ್ರೀ ಎಂ.ಪಿ.ಸುನೀಲ್ ಸುಬ್ರಮಣಿ**
ಉತ್ತರಿಸಬೇಕಾದ ದಿನಾಂಕ	:	**18-07-2019**
ಉತ್ತರಿಸುವ ಸಚಿವರು	:	**ಮುಖ್ಯಮಂತ್ರಿಗಳು**

*****

	ಪ್ರಶ್ನೆ		ಉತ್ತರ
ಅ)	ಬೆಂಗಳೂರು ನಗರದಲ್ಲಿ ಹೈ-ಟೆನ್ಷನ್ ವಿದ್ಯುತ್ ತಂತಿ ಮಾರ್ಗ ಹಾದು ಹೋಗಿರುವ ಒಟ್ಟು ಉದ್ದ ಎಷ್ಟು; ಈ ಹೈ-ಟೆನ್ಷನ್ ವಿದ್ಯುತ್ ತಂತಿ ಹಾದು ಹೋಗಿರುವ ಭೂಮಿಯು ಯಾರ ಒಡೆತನದ್ದಾಗಿರುತ್ತದೆ; (ವಿವರ ನೀಡುವುದು).	ಅ)	ಬೆಂಗಳೂರು ನಗರದಲ್ಲಿ ಸುಮಾರು 1046.316 ಸರ್ಕ್ಯೂಟ್ ಕಿ.ಮೀ. ಗಳಷ್ಟು ಹೈ-ಟೆನ್ಷನ್ ವಿದ್ಯುತ್ ಪ್ರಸರಣ ಮಾರ್ಗ ಹಾದುಹೋಗಿರುತ್ತದೆ. ಹೈ-ಟೆನ್ಷನ್ ವಿದ್ಯುತ್ ತಂತಿ ಹಾದು ಹೋಗಿರುವ ಭೂಮಿಯು ಸರ್ಕಾರಿ/ಭೂಮಾಲೀಕರ ಒಡೆತನದ್ದಾಗಿರುತ್ತದೆ.
ಆ)	ಹೈ-ಟೆನ್ಷನ್ ವಿದ್ಯುತ್ ತಂತಿಗಳನ್ನು ಅಳವಡಿಸುವ ಸಂದರ್ಭದಲ್ಲಿ ಅಲ್ಲಿನ ಭೂ ಮಾಲೀಕರಿಗೆ ಪರಿಹಾರವನ್ನು ನೀಡಲಾಗುವುದೇ; ಇದ್ದಲ್ಲಿ, ಪರಿಹಾರದ ಮೊತ್ತ ನೀಡಿದ ನಂತರ ಭೂಮಿಯನ್ನು ಇಂಧನ ಇಲಾಖೆಯು ತನ್ನ ವಶಕ್ಕೆ ಪಡೆಯದಿರಲು ಕಾರಣವೇನು;	ಆ) ಮತ್ತು ಇ)	ವಿದ್ಯುತ್ ಮಾರ್ಗದಲ್ಲಿ ಬರುವ ಮರಗಳನ್ನು ಕಡಿಯುವುದರಿಂದ ಆಗುವ ನಷ್ಟವನ್ನು ತೋಟಗಾರಿಕೆ ಇಲಾಖೆ ಹಾಗೂ ಅರಣ್ಯ ಇಲಾಖೆಯವರು ಸ್ಥಳ ಪರಿಶೀಲಿಸಿ, ಪ್ರಸ್ತುತ ಸರ್ಕಾರದ ದರಸೂಚಿಯ ಆಧಾರದ ಮೇಲೆ ನಷ್ಟ ಪರಿಹಾರದ ಮೌಲ್ಯಮಾಪನ ವರದಿಯ ಆಧಾರದ ಮೇಲೆ ಹಾಗೂ ಕೃಷಿ ಇಲಾಖೆಯವರು ನೀಡುವ ಬೆಳೆ ಇಳುವರಿ ಮತ್ತು ಕೃಷಿ ಉತ್ಪನ್ನ ಮಾರುಕಟ್ಟೆಯ ಪ್ರಸ್ತುತ ಸರ್ಕಾರದ ದರಸೂಚಿಯ ಆಧಾರದ ಮೇಲೆ ರೈತರಿಗೆ /ಜಮೀನುದಾರರಿಗೆ ಮರ/ಬೆಳೆನಷ್ಟಗಳ ಪರಿಹಾರದ ಮೊತ್ತವನ್ನು ನಿರ್ಧರಿಸಲಾಗುವುದು. ಈ ಬೆಳೆ ಮತ್ತು ಮರಗಳ ನಷ್ಟ ಪರಿಹಾರವನ್ನು ತಂತಿ ಎಳೆಯುವ ಕಾರ್ಯವನ್ನು ಕೈಗೆತ್ತಿಕೊಳ್ಳುವ ಮುನ್ನ ರೈತರಿಗೆ ಚೆಕ್ಕು/ ಡಿಡಿ ರೂಪದಲ್ಲಿ ನೀಡಲಾಗುವುದು. ಅಲ್ಲದೇ, ಜಮೀನುಗಳಲ್ಲಿ ನಿರ್ಮಿಸುವ ವಿದ್ಯುತ್ ಗೋಪುರಗಳಿಂದ ರೈತರಿಗೆ /ಜಮೀನುದಾರರಿಗೆ ಆಗುವ ನಷ್ಟ ಪರಿಹಾರ (ವಿವಿಧ ಗೋಪುರಗಳ ಅಳತೆಗನುಗುಣವಾಗಿ) ಅಲ್ಲದೆ ವಿದ್ಯುತ್ ತಂತಿ ಹಾದು ಹೋಗುವ ಮಾರ್ಗದಲ್ಲಿ ಜಮೀನಿನ ದರದಲ್ಲಾಗುವ ಕ್ಷೀಣತೆಯ ಸಂಬಂಧವಾಗಿ ನಷ್ಟ ಪರಿಹಾರವಾಗಿ, ಸಂಬಂಧಪಟ್ಟ ಜಿಲ್ಲಾಧಿಕಾರಿಯವರು ನಿಗದಿಪಡಿಸುವ ಭೂ ಪರಿಹಾರ ಮೊತ್ತದನ್ವಯ ನಷ್ಟ ಪರಿಹಾರವನ್ನು ನೀಡಲಾಗುತ್ತಿದೆ. ಮೇಲೆ ತಿಳಿಸಿರುವಂತೆ, ಭೂ ಮಾಲೀಕರಿಗೆ ವಿದ್ಯುತ್ ತಂತಿ ಹಾದು ಹೋಗುವ ಮಾರ್ಗಕ್ಕೆ ಜಮೀನಿನ ದರದಲ್ಲಾಗುವ ಕ್ಷೀಣತೆಯ ಸಂಬಂಧವಾಗಿಪರಿಹಾರವನ್ನು ಮಾತ್ರ ನೀಡಲಾಗುವುದು. ಆದುದರಿಂದ, ಹೈ ಟೆನ್ಷನ್ ತಂತಿಗಳನ್ನು ಅಳವಡಿಸುವ ಭೂಮಿಯನ್ನು ಕ.ವಿ.ಪ್ರ.ನಿ.ನಿ.ಯು ವಶಪಡಿಸಿಕೊಳ್ಳುವ ಪದ್ಧತಿ ಇರುವುದಿಲ್ಲ.
ಇ)	ಹೈ-ಟೆನ್ಷನ್ ವಿದ್ಯುತ್ ತಂತಿಗಳನ್ನು ಅಳವಡಿಸುವ ಸಂದರ್ಭದಲ್ಲಿ ಭೂಮಿ ಪಡೆಯಲು ಅನುಸರಿಸುವ ಮಾನದಂಡಗಳೇನು; (ವಿವರ ನೀಡುವುದು)		

ಈ)	ಬೆಂಗಳೂರು ನಗರದಲ್ಲಿ ನಿಯಮ ಮೀರಿ ಹೈ-ಟೆನ್ಷನ್ ವಿದ್ಯುತ್ ತಂತಿ ಕೆಳಗೆ ಕಟ್ಟಿರುವ ಕಟ್ಟಡಗಳನ್ನು ತೆರವುಗೊಳಿಸಲು ಬೆಂಗಳೂರು ಮಹಾನಗರ ಪಾಲಿಕೆಯ ಗಮನಕ್ಕೆ ಇಲಾಖೆಯು ಪತ್ರ ವ್ಯವಹಾರ ಅಥವಾ ಸಭೆ ನಡೆಸಲಾಗಿದೆಯೇ? (ವಿವರ ನೀಡುವುದು)	ಈ)	ಬೆಂಗಳೂರು ನಗರದಲ್ಲಿ ನಿಯಮ ಬಾಹಿರವಾಗಿ ಹೈ-ಟೆನ್ಷನ್ ವಿದ್ಯುತ್ ಮಾರ್ಗಗಳ ಕೆಳಗೆ ನಿರ್ಮಿಸಿರುವ ಕಟ್ಟಡಗಳನ್ನು ತೆರವುಗೊಳಿಸುವ ಸಂಬಂಧ ಮಾನ್ಯ ಉಪ-ಮುಖ್ಯ ಮಂತ್ರಿಗಳ ಅಧ್ಯಕ್ಷತೆಯಲ್ಲಿ ದಿನಾಂಕ:27.05.2019 ರಂದು, ಮಾನ್ಯ ಮೇಯರ್ ರವರ ಅಧ್ಯಕ್ಷತೆಯಲ್ಲಿ ದಿನಾಂಕ:29.05.2019 ರಂದು ಮತ್ತು ವಿಶೇಷ ಆಯುಕ್ತರು, ಬಿ.ಬಿ.ಎಂ.ಪಿ. ರವರ ಅಧ್ಯಕ್ಷತೆಯಲ್ಲಿ ದಿನಾಂಕ: 04.6.2019 ಮತ್ತು 18.6.2019 ರಂದು ಸಮನ್ವಯ ಸಭೆಗಳನ್ನು ನಡೆಸಿ ತೆಗೆದುಕೊಳ್ಳಬೇಕಿರುವ ಕ್ರಮಗಳ ಬಗ್ಗೆ ಚರ್ಚೆ ನಡೆಸಲಾಗಿದೆ. ಅಲ್ಲದೆ, ಸದರಿ ಸ್ಥಳಗಳಲ್ಲಿ ನಿರ್ಮಿಸಿರುವ ಕಟ್ಟಡಗಳಲ್ಲಿ/ಮನೆಗಳಲ್ಲಿ ವಾಸವಾಗಿರುವ ಜನರಿಗೆ ನೋಟಿಸ್/ಭಿತ್ತಿ ಪತ್ರಗಳನ್ನು ನೀಡಲಾಗಿದೆ, ಹಾಗೂ ಸೂಕ್ತ ಕ್ರಮ ಜರುಗಿಸಲು ಪ್ರತಿಗಳನ್ನು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯವರಿಗೆ ಸಲ್ಲಿಸಲಾಗಿದೆ. ಪ್ರಮುಖ ಸ್ಥಳೀಯ ದಿನಪತ್ರಿಕೆಗಳಲ್ಲಿ ಸಾರ್ವಜನಿಕರ ಸುರಕ್ಷತೆಯ ಬಗ್ಗೆ ಜಾಗೃತಿ ಮೂಡಿಸಲು ಜಾಹಿರಾತುಗಳನ್ನು ಪ್ರಕಟಿಸಲಾಗಿರುತ್ತದೆ. ಭಾರತೀಯ ವಿದ್ಯುಚ್ಛಕ್ತಿ ನಿಯಮಗಳು/ ಕಾಯ್ದೆಯನ್ನು ಉಲ್ಲಂಘಿಸಿ ನಿರ್ಮಿಸಿರುವ / ನಿರ್ಮಾಣ ಹಂತದಲ್ಲಿರುವ ಕಟ್ಟಡ / ಕಾಮಗಾರಿ, ವಿತರಣಾ ಮಾರ್ಗಗಳ ಕೆಳಗೆ / ಹತ್ತಿರ ಮರಗಿಡಗಳನ್ನು ಬೆಳೆಸಿರುವುದು ಹಾಗೂ ಬೆ.ವಿ.ಕಂ. ನವಿತರಣಾ ಮಾರ್ಗಗಳಿಗೆ ಹಾನಿ ಮತ್ತು ಜೀವಕ್ಕೆ ಅಪಾಯತರುವಂತಹ 10,718 ಸಂಖ್ಯೆಯ ಸ್ಥಾವರಗಳನ್ನು ಗುರುತಿಸಿ, ಬೆಂಗಳೂರು ವಿದ್ಯುತ್ ಸರಬರಾಜು ಕಂಪನಿಯು ಸಂಬಂಧಪಟ್ಟ ವಿದ್ಯುತ್ ಗ್ರಾಹಕರಿಗೆ ನೋಟೀಸ್ ನೀಡಿ, ಬಿ.ಬಿ.ಎಂ.ಪಿ.ಯ ಅಧಿಕಾರಿಗಳ ಜೊತೆ ಚರ್ಚಿಸಿ ಪಟ್ಟಿಯನ್ನು ಮುಂದಿನ ಸೂಕ್ತ ಕ್ರಮಕ್ಕಾಗಿ ನೀಡಲಾಗಿರುತ್ತದೆ.

ಎನರ್ಜಿ 68 ಇಬಿಎಸ್ 2019

(ಬಿ.ಎಸ್.ಯಡಿಯೂರಪ್ಪ)
ಮುಖ್ಯಮಂತ್ರಿ